ಬಳ್ಳಾರಿಯಲ್ಲಿ ಕರ್ನಾಟಕ ಗೃಹ ಮಂಡಳಿಯು ಕಟ್ಟಿಸಿರುವ ಮನೆಗಳು

ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಒ.ಪಿ.ಡಿ. ಬಳಿ ಕರ್ನಾಟಕ ಗೃಹ ಮಂಡಳಿಯು ಇತ್ತೀಚೆಗೆ ಕಟ್ಟಿಸಿದ ವಸತಿ ಗೃಹಗಳ ಬಹಳ ಕೀಳಾಗಿದ್ದು ಮತ್ತು ಕಳಪೆ ಕಟ್ಟಡಗಳೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಸದರಿ ಮನೆಯನ್ನು ಗೃಹ ನಿರ್ಮಾಣ ಮಂಡಳಿಯು ವೆಚ್ಚದಲ್ಲಿ ದುರಸ್ತು ಪಡಿಸಲು ಕ್ರಮ ಗಳೇನಾದರೂ ತೆಗೆದುಕೊಂಡಿದೆಯೆ ?

ಇ) ಹಾಗಿದ್ದಲ್ಲಿ ಸದರಿ ದುರಸ್ತಿಗೆ ಖರ್ಚಾದ ವೆಚ್ಚ ವೆಷ್ಟು ?

ಈ) ಹಾಗೆ ದುರಸ್ತುಪಡಿಸಿದ ವೆಚ್ಚದ ಹಣವನ್ನು ಸರ್ಕಾರವೆ ಯಾ ಕಂಟ್ರಾಕ್ಟರ್ ಯಾ ಕಳಪೆ ಕಟ್ಟಡಗಳ ಕೆಲಸಕ್ಕೆ ಜವಾಬ್ದಾರಿಯುತ ಅಧಿಕಾರಿಗಳು ಭರಿಸುವರೆ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು),—

ಅ) ಹೌದು.

ಆ) ವಿಷಯವು ಪರಿಶೀಲನೆಯಲ್ಲಿ ಇದೆ,

ಇ) ಈಗ ಉದ್ಭವಿಸುವುದಿಲ್ಲ.

ಈ) ಈಗ ಉದ್ಭವಿಸುವುದಿಲ್ಲ. ಹಾಗೆ ಕಂಡುಹಿಡಿಯಲಾದ ಕಳಪೆ ನಿರ್ಮಾಣ ವೆಚ್ಚವನ್ನು ಕಂಟ್ರಾಕ್ಟರ್ ಬಾಧ್ಯತೆ ಮೊತ್ತ ವೆಚ್ಚದಲ್ಲಿ ಮಾಡಿಸಲಾಗುವುದಿಲ್ಲ.

ಸಣ್ಣ ಮತ್ತು ಮಾಧ್ಯಮ ನಗರ ಅಭಿವೃದ್ಧಿ ಯೋಜನೆ ಕುರಿತು

ಶ್ರೀ. ಶ್ರೀ ಎಂ. ರಾಮಪ್ಪ (ಬಳ್ಳಾರಿ) —ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ಇಂಟಿಗ್ರೇಟೆಡ್ ಯೋಜನೆಯು ಭಾಗ ಡಿ-ರ ಯೋಜನೆಯಲ್ಲಿ ಪ್ರಸ್ತಾಪಿಸಿದಂತೆ ಹೊಸ ಪೇಟೆ ನಗರಾಭಿವೃದ್ಧಿ ಮಂಡಳಿಯು ಒಪ್ಪಿದ ಅಂದಾಜು ಮತ್ತು ಯೋಜನೆಗಳನ್ವಯ ಸರ್ವೆ ನಂ. ೨೬೧ಎ, ಆಮರಾವತಿ ೨೨೬ಸಿ, ಆಮರಾವತಿ ೧೮೭ ವಿಜಯನಗರ ಕಾಲೇಜು ಸಮೀಪ, ೧೨೧ಸಿ ಮತ್ತು ಡಿ ಮತ್ತು ೧೩೮ ಬಳ್ಳಾರಿ ದಸ್ತೆ ಇವುಗಳನ್ನು ಸರಕಾರಕ್ಕೆ ತರಲಾಗಿದೆಯೆ ?

೨ ಈ ಯೋಜನೆಯಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಅನುಕೂಲ ಮಾಡಲು ಅಂದಾಜು ಮಾಡಲಾಗಿದೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

i) ಆಮರಾವತಿ ಸರ್ವೆ ನಂ. ೨೬೧ಎರಲ್ಲಿ ಳಿವಿ ನಿವೇಶನಗಳನ್ನು ೬ ಮೂಲೆ ನಿವೇಶನ ಗಳನ್ನು ಹರಾಜು ಮೂಲಕ ಕಾರ್ಯಕ್ರಮ ಅನುಸಾರವಾಗಿ ವಿಲೇವಾರಿ ಮಾಡಲಾಯಿತು.

ii) ಸರ್ವೆ ನಂ. ೨೨೬ಸಿ ರಲ್ಲಿ ಬೆಂಗಳೂರು ಉಚ್ಚನ್ಯಾಯಾಲಯವು ಸಮಗ್ರ ಪಟ್ಟಣ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಭೂ ಸ್ವಾಧೀನಕ್ಕೆ ತಡೆ ಆಜ್ಞೆಯಿಂದ ಈ ಯೋಜನೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ.

iii) ಸರ್ವೆ ನಂ. ೧೮೭ ವಿಜಯನಗರ ಕಾಲೇಜು ಹತ್ತಿರ ಭೂಸ್ವಾಧೀನ ಹೆಚ್ಚಿನ ಬೆಲೆ ಬರುವುದ ರಿಂದ ಇದನ್ನು ಕೈಬಿಡಲು ತೀರ್ಮಾನಿಸಿತು.

iv) ಸರ್ವೆ ನಂ ೧೨೧ಸಿ, ೧೨೧ಡಿ ಮತ್ತು ೧೩೮ರಲ್ಲಿ ಉಚ್ಚ ನ್ಯಾಯಾಲಯವು ಸಮಗ್ರಪಟ್ಟಣ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಭೂಸ್ವಾಧೀನ ಪ್ರಕರಣ ತಡೆಯುವಿಕೆ ನೀಡಿದ್ದರಿಂದ ಈ ಯೋಜನೆ ಯನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ.

೨) ಆಮರಾವತಿಯ ಸ. ನಂ. ೨೬೧.ಎರಲ್ಲಿ ೪೨ ಜನರಿಗೆ ನಿವೇಶನಗಳನ್ನು ಹಂಚಲಾಗಿದೆ.

ಇತರೆ ಯೋಜನೆಗಳನ್ನು ಮೇಲೆ ಹೇಳಿರುವ ಕಾರಣಗಳಿಂದ ಕೈಬಿಟ್ಟಿರುವುದರಿಂದ ಯಾರೂ ಫಲಾನುಭವಿಗಳಿರುವುದಿಲ್ಲ.